# ಇಬ್ರಾಹಿಂ ಬಿನ್ ಆದಂ

ಹೆಚ್. ಪಾಂಡುರಂಗ ವಿಠಲ

*ಸೂಫಿ ಸಂತ ಇಬ್ರಾಹಿಂ ಆದಂನ ಜೀವನದ ಸ್ವಾರಸ್ಯಕರ ಘಟನೆಗಳನ್ನು ನಿರೂಪಿಸಿರುವ ಶ್ರೀಪಾಂಡುರಂಗ ವಿಠಲರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.*

ಖೊರಾಸನ್ ದೇಶದ ರಾಜಕುಮಾರ ಇಬ್ರಾಹಿಂ ಬಿನ್ ಆದಂ. ಮಿತಿಯಿಲ್ಲದ ಸಂಪತ್ತು ಆತನದು. ಆತನ ತಂದೆ ಆತನಿಗೆ ಅನೇಕ ಪದಾರ್ಥಗಳು, ಸೇವಕರು, ಕಲಾವಂತರು—ಎಲ್ಲವನ್ನೂ ಹೆಚ್ಚುಹೆಚ್ಚಾಗಿ ನೀಡುತ್ತ, ಯಾವುದೇ ಕೊರತೆ ಇಲ್ಲದಂತೆ ಮಾಡಿದ್ದ. ದಿನಗಳು ಸಂತಸದಿಂದ ಸರಿದವು. ಆದರೂ ಕೆಲವು ವೇಳೆ ಏನೋ ಕೊರತೆಯ ಭಾವನೆ ಇಬ್ರಾಹಿಮನಿಗೆ. ಅದನ್ನು ನೀಗಲು ಗೆಳೆಯರಿಗೆ ಸಮಾರಂಭಗಳನ್ನು ಏರ್ಪಡಿಸುವನು, ಬೇಟೆ ಆಡುವನು, ಉಳಿದವರಿಗಿಂತ ವೇಗವಾಗಿ ಕುದುರೆ ಓಡಿಸುವನು. ಶಿಖರಗಳನ್ನೇರಿ ಕೆಳಗೆ ಚುಕ್ಕೆಗಳಂತೆ ಕಾಣುವ ಪ್ರಾಣಿಗಳನ್ನು ನೋಡುವುದು ಅವನಿಗೆ ಖುಷಿ.

ಒಮ್ಮೆ ಇಬ್ರಾಹಿಂ ಒಬ್ಬ ಗುಲಾಮನನ್ನು ಕೊಂಡು ಕೊಂಡನು. "ನಿನ್ನ ಹೆಸರೇನು?" ಎಂದು ಕೇಳಿದಾಗ ಅವನೆಂದ : "ನಾನು ನಿಮ್ಮ ಸೇವಕ. ನೀವು ಏನು ಹೆಸರು ಕೊಡುತ್ತೀರೊ ಅದೇ ನನ್ನದು." "ನೀನು ಏನು ಉಣ್ಣು ತ್ತೀಯೆ?" ಎಂಬ ಪ್ರಶ್ನೆಗೆ ಗುಲಾಮ ಉತ್ತರಿಸಿದ: "ನಾನು ಸೇವಕ. ನೀವು ಏನು ಕೊಡುತ್ತೀರೊ ಅದನ್ನು ಉಣ್ಣು ತ್ತೇನೆ." "ನಿನಗೆ ಯಾವ ಉಡುಪು ಇಷ್ಟ?" ಎಂದು ಕೇಳಿದಾಗ, "ನೀವು ಏನು ಕೊಡುತ್ತೀರೊ ಅದು" ಎಂದನು ಆ ಸೇವಕ. "ನಿನ್ನ ಇಚ್ಛೆ ಎಂಬುದು ಇಲ್ಲವೆ?"— ಇಬ್ರಾಹಿಂ ಕೇಳಿದ. ಗುಲಾಮನ ಉತ್ತರ: "ನಾನು ನಿಮ್ಮ ಸೇವಕ. ಒಡೆಯನ ಇಚ್ಛೆಯೇ ಸೇವಕನ ಇಚ್ಛೆ." ಗುಲಾಮನ ಉತ್ತರ ಇಬ್ರಾಹಿಂನ ಮೇಲೆ ಅದ್ಭುತ ಪರಿ ಣಾಮವನ್ನು ಉಂಟುಮಾಡಿತು— ಭಗವಂತನ ವಿಷಯ ದಲ್ಲಿ ಭಕ್ತನ ಮನೋಭಾವ ಹೇಗಿರಬೇಕೆಂಬುದನ್ನು ಅವನು ಅಂದು ಅರಿತನು. ಇದೇ ಪೂರ್ಣ ಶರಣಾಗತಿಯ ಭಾವ—ಭಗವದಿಚ್ಛೆಗೆ ಸಂಪೂರ್ಣ ಅಧೀನನಾಗಿರುವುದು.

ಇಬ್ರಾಹಿಂ ಆದಂನಲ್ಲಿ ವೈರಾಗ್ಯ ಮನೋಭಾವವನ್ನು ಕೆರಳಿಸುವ ಇನ್ನೊಂದು ಘಟನೆ ಸಂಭವಿಸಿತು. ರಾಜನು ಒಂದು ದಿನ ದರ್ಬಾರಿನಲ್ಲಿದ್ದನು. ಇದ್ದಕ್ಕಿದ್ದಂತೆಯೇ ಒಬ್ಬ ಫಕೀರನು ರಾಜಸಭೆಯನ್ನು ಪ್ರವೇಶಿಸಿದನು. "ನಿನಗೇನು ಬೇಕು?" ಎಂದು ರಾಜನು ಕೇಳಿದಾಗ "ನಿನ್ನ ಈ ಯಾತ್ರೀನಿವಾಸದಲ್ಲಿ ನನಗೆ ಒಂದು ದಿನ ತಂಗಲು ಅವಕಾಶ ಕೊಡುತ್ತೀಯಾ?" ಎಂದು ಫಕೀರನು ಕೇಳಿದನು. ರಾಜನು ಹೇಳಿದ: "ಏನು ನೀನು ಹೇಳುತ್ತಿರುವುದು? ಇದು ನನ್ನ ಅರಮನೆ, ಯಾತ್ರೀನಿವಾಸವಲ್ಲ." ಆಗ ಫಕೀರ ಕೇಳಿದ: "ನಿನಗಿಂತ ಮುಂಚೆ ಇಲ್ಲಿ ಯಾರು ಇದ್ದರು?" "ನನ್ನ ತಂದೆ." "ನಿನ್ನ ತಂದೆಗಿಂತ ಮುಂಚೆ ಯಾರಿದ್ದರು?" "ನನ್ನ ಅಜ್ಜ." "ನಿನ್ನ ನಂತರ ಇಲ್ಲಿ ಯಾರಿರುತ್ತಾರೆ?" "ನನ್ನ ಮಗ." "ಹೀಗೆ ಹಲವರು ಬಂದು ಕೆಲಕಾಲ ತಂಗಿಹೋಗುತ್ತಿರುವಾಗ ಇದನ್ನು ಯಾತ್ರಿನಿವಾಸ ಎಂದಲ್ಲದೆ ಮತ್ತಿನ್ನೇನು ಕರೆಯುತ್ತೀಯ?" ಫಕೀರನು ಹೀಗೆ ಹೇಳಿ ಹಿಂತಿರುಗಿ ಹೊರಟುಹೋದನು.

---

**ಒಂದೇ ಹೃದಯದಲ್ಲಿ ಭಗವತ್ಪ್ರೇಮ ಮತ್ತು ಜಗತ್ಪ್ರೇಮ—ಎರಡೂ ಇರಲಾರವು.**

*—ಇಬ್ರಾಹಿಂ ಆದಂ*

---

ಇಬ್ರಾಹಿಂ ಒಮ್ಮೆ ಬೇಟೆಗೆ ಹೋದಾಗ ತುಂಬ ಸುಂದರವಾದ ಜಿಂಕೆಯೊಂದನ್ನು ನೋಡಿ ಬೆನ್ನಟ್ಟಿದ. ಅಳ ವಿಗೆ ಬಂದಾಗ ಬಾಣ ಹೂಡಿದ. ಆಗ ಒಂದು ಧ್ವನಿ ಕೇಳಿಸಿ ದಂತಾಯಿತು: "ಇಬ್ರಾಹಿಂ, ಇದನ್ನು ಮಾಡಲು ನೀನು ಹುಟ್ಟಿದ್ದೀಯಾ? ಜೀವನದಲ್ಲಿ ಇದಕ್ಕೂ ಒಳ್ಳೆಯ ಕೆಲಸ ಇಲ್ಲವೆ?"

ಇಬ್ರಾಹಿಂ ತಿರುಗಿ ನೋಡಿದ. ಯಾರೂ ಇಲ್ಲ. ಇದನ್ನು ತನ್ನ ಊಹೆ ಎಂದು ತಿಳಿದ. ಪುನಃ ಆ ಮೋಹಕ ಜಿಂಕೆಯ ಬೆನ್ನುಹತ್ತಿದ. ಬಾಣ ಹೂಡಿದ. ಒಡನೆ ಇನ್ನಷ್ಟು ಜೋರಾಗಿ ಅದೇ ಧ್ವನಿ ಮೊಳಗಿತು: "ಇಬ್ರಾಹಿಂ, ಇದನ್ನು ಮಾಡಲೆಂದೇ ಹುಟ್ಟಿದ್ದೀಯಾ? ಇನ್ನೂ ಒಳ್ಳೆಯ ಕೆಲಸ ಇಲ್ಲವೆ?"

ಪುನಃ ನಿಂತು ದಿಕ್ಕು ದಿಕ್ಕುಗಳನ್ನೂ ಹುಡುಕಿ ನೋಡಿದ. ಯಾರೂ ಕಾಣಿಸಲಿಲ್ಲ. ಮೌನ, ಏಕಾಕಿತನ, ಸಂಕಟಗಳಲ್ಲಿ ಈ ಭ್ರಮೆ ಉಂಟಾಗಿದೆ ಎಂದು ನಿರ್ಧರಿಸಿದ. ಪುನಃ ಜಿಂಕೆಯ ಜಾಡು ಹಿಡಿದ. ಬಾಣ ಹೂಡಿದೊಡನೆ ಮತ್ತೆ ಅದೇ ಧ್ವನಿ ಗರ್ಜಿಸಿತು : "ನಾನು ಇದಕ್ಕಾಗಿ ನಿನ್ನನ್ನು ಹುಟ್ಟಿ ಸಲಿಲ್ಲ. ಇದಕ್ಕೂ ಒಳ್ಳೆಯ ಕೆಲಸ ಮಾಡಲಾರೆಯಾ?" ಸುತ್ತಲಿನ ಗಿರಿ ಕಣಿವೆಗಳು ಇದನ್ನು ಪ್ರತಿಧ್ವನಿಸಿ ಹಲವು ಬಾರಿ ಕೇಳಿಸಿದವು : "ಇಬ್ರಾಹಿಂ ಇಬ್ರಾಹಿಂ ಇದಕ್ಕಾಗಿ

ಹುಟ್ಟಲಿಲ್ಲ. ಇದಕ್ಕಾಗಿ ಹುಟ್ಟಿಲ್ಲ. ಇನ್ನೂ ಒಳ್ಳೆಯ ಕೆಲಸ...."

ಇಬ್ರಾಹಿಂ ಆಯುಧಗಳನ್ನು ಬಿಸಾಡಿದ. ಬೇಟೆಗಾರ ನಿಗಿಂತ ನಾನು ಮೇಲಾದವ. ರಾಜಕುಮಾರನಿಗಿಂತಲೂ ಮೇಲು... ಎಂದು ಭೂಮಿ ಬಿರಿಯುವಂತೆ ಕೂಗಿದ—ಕಿವಿ ಮುಚ್ಚಿದರೂ ಆ ಧ್ವನಿ ಕೇಳುವಂತೆ. ಮೊದಲಬಾರಿಗೆ ಬೇಟೆ ಆಡದೆಯೇ ಆತ ಅರಮನೆಗೆ ಹಿಂದಿರುಗಿದ.

ಅವನ ಹಿಂದಿನ ಜೀವನ ಕನಸಿನಂತೆ ಕಂಡಿತು. ದೇವರು ತನ್ನನ್ನು ಏಕೆ ಹುಟ್ಟಿಸಿದ ಎಂಬ ಪ್ರಶ್ನೆ ಕಾಡಿತು. ಅರಮನೆ ತೊರೆದು ಕಂಬಳಿ ಹೊದೆದು, ಗೆಳೆಯರನ್ನು ತ್ಯಜಿಸಿ ಸೂಫಿ ಆಗಿ ಹೊರಟನು. ಮಾಲಿಯಾಗಿ ಊರುಗಳಲ್ಲಿ ಕೆಲಸ ಮಾಡುವನು. ರಾಜಕುಮಾರ ಎಂದು ಗುರುತು ಹಿಡಿದೊಡನೆ ಬೇರೆ ಊರಿಗೆ ಹೋಗುವನು. ಕಾಡು, ಗುಹೆಗಳಲ್ಲಿ ಧ್ಯಾನಿಸುವನು. ಕೆಲವು ವರ್ಷಗಳಲ್ಲಿ ಜಗತ್ತಿನ ಬಗ್ಗೆ ನಿಖರವಾದ ಅರಿವು ಪಡೆದು, ಅದನ್ನು ತಿಳಿಯ ಬಂದವರಿಗೆ ನಿರಾಸೆ ಮಾಡದೆ ಸೂಫಿ ಗುರು ಎಂದು ಹೆಸರಾದನು.

❖ ❖ ❖

ಒಮ್ಮೆ ಅವನಿಗೆ ತನಗೊಬ್ಬ ಗುರು ಬೇಕು ಎನಿಸಿತು. ಬಾಲಖ್ ಊರಿನ ಅಬು ಅಲಿ ಸಕೀಕ್ ಎಂಬ ಹೆಸರಾಂತ ಗುರುವನ್ನು ನೋಡಿದನು. ಆತ ಇವನಿಗೆ ಮರೆಯಲಾಗದ ಪಾಠ ಕಲಿಸಿದನು.

ಸಕೀಕ್‌ನು "ಜೀವನ ನಡೆಸಲು ಏನು ಮಾಡುತ್ತಿರುವೆ?" ಎಂದು ಕೇಳಿದನು. ಇಬ್ರಾಹಿಂನು "ಮಾಲಿಯ ಕೆಲಸ ಸಿಕ್ಕಿದಾಗ ಅದನ್ನು ಮಾಡುವೆ, ಕೆಲಸ ದೊರೆಯದೆ ಇರುವಾಗ ಯಾರಾದರೂ ಆಹಾರ ಕೊಡುವರು. ಅದೂ ದೊರೆಯದಿದ್ದಾಗ ಉಪವಾಸ ಮಾಡುವೆ. ದೊರೆತರೆ ಭಗವಂತನ ದಯೆಗಾಗಿ ವಂದಿಸುವೆ" ಎಂದನು.

ಉಳಿದವರು ಇಬ್ರಾಹಿಮನ ಸರಳತೆಯನ್ನು ಕೊಂಡಾಡಿದರು. ಆದರೆ ಸಕೀಕ್ ಕಿಡಿಕಿಡಿಯಾದ. "ನಾಯಿಗಳೂ ಹೀಗೆ ಮಾಡುವುವು. ಏನಾದರೂ ದೊರೆತರೆ ಬಾಲ ಅಲ್ಲಾಡಿಸುವುವು. ದೊರೆಯದಿದ್ದಾಗ ಸಹನೆಯಿಂದ ಕಾಯುವುವು. ಅವಕ್ಕಿಂತ ಮನುಷ್ಯನಾಗಿ ನೀನು ಹೇಗೆ ಮೇಲು?" ಎಂದ. ಇಬ್ರಾಹಿಂ ಸಿಟ್ಟಾಗಲಿಲ್ಲ. "ಮನುಷ್ಯನಾಗಿ ನಾನು ಹೇಗೆ ವರ್ತಿಸಬೇಕು?" ಎಂದು ಕೇಳಿದ.

ಸಕೀಕ್ ಹೀಗೆಂದ: "ನನಗೆ ಏನಾದರೂ ದೊರೆತರೆ ಅದರ ಆವಶ್ಯಕತೆ ಇರುವವರಿಗೆ ಹಂಚುವೆ. ಏನೂ ದೊರೆಯದಾದಾಗ ಭಗವಂತನ ದಯೆಗೆ ವಂದಿಸುವೆ." ಗುರುವಿನ ಈ ಮಾತನ್ನು ಇಬ್ರಾಹಿಂ ಜೀವನವಿಡೀ ನೆನಪಿನಲ್ಲಿ ಇಟ್ಟಿದ್ದ.

ಇಬ್ರಾಹಿಂ ಅಬು ಅಲಿ ಸಕೀಕ್ ಒಡನೆ ಕೆಲವು ಕಾಲ ಇದ್ದ. ಅವನು ಹೊರಡುವಾಗ ಗುರು ಹೇಳಿದ : "ದೇವರ ಸೇವೆ ಹೇಗೆ ಮಾಡಿಯೇನು ಎಂದು ಯೋಚಿಸಬೇಡ. ಮಾನವ ಸೇವೆಯನ್ನು ಮಾಡಲು ಕಲಿ. ಗುರುಗಳನ್ನು ಹುಡುಕುತ್ತ ಹೋಗಬೇಡ. ನಿನ್ನ ಹಾದಿಯಲ್ಲಿ ಹಲವರು ಸಿಗುವರು. ಸರಳ ಜನರಿಂದಲೂ ನೀನು ಕಲಿಯಬಹುದು. ಜನರು ಇಲ್ಲದಲ್ಲಿ ದೇವರೇ ತನ್ನ ದೂತರನ್ನು ಕಳುಹಿಸುವನು."

**ನಾವು ಮಾತನಾಡುವಾಗ ವ್ಯಾಕರಣ ದೋಷವಿರದಂತೆ ಎಚ್ಚರಿಕೆ ವಹಿಸುತ್ತೇವೆ. ಆದರೆ ಕೆಲಸದ ವಿಷಯದಲ್ಲಿ ಅದೇ ಎಚ್ಚರಿಕೆ ವಹಿಸುವುದಿಲ್ಲ, ನಾವು ತಪ್ಪುತ್ತೇವೆ.**

—*ಇಬ್ರಾಹಿಂ ಆದಂ.*

ಒಮ್ಮೆ ಇಬ್ರಾಹಿಂ ಮರುಭೂಮಿಯಲ್ಲಿ ಪ್ರಯಾಣಿಸುತ್ತಿದ್ದ. ರಾತ್ರಿಯಾಯಿತು. ಅಲ್ಲಿಯೆ ಒಂದೆಡೆ ಮಲಗಿ ನಿದ್ರೆಹೋದ. ಒಂದು ಕನಸು ಕಂಡ.... ತುಂಬ ಬೆಳಕು. ಹಗಲಾಯಿತೆಂದು ಎದ್ದು ಕುಳಿತ. ಆಗ ಅವನ ಮುಂದೆ ಬೆನ್ನ ಮೇಲೆ ರೆಕ್ಕೆಯುಳ್ಳ, ಬೆಳಕಿನ ಉಡುಪು ಹೊದೆದವನೊಬ್ಬ ಕುಳಿತಿದ್ದ. ಕೈಯಲ್ಲಿ ಬಂಗಾರದ ಪುಸ್ತಕವೊಂದನ್ನು ಹಿಡಿದು ಏನೋ ಬರೆಯುತ್ತಿದ್ದ.

ಇಬ್ರಾಹಿಮನಿಗೆ ಕುತೂಹಲವಾಯಿತು. ತಾನು ಎಚ್ಚರವಾಗಿರುವುದನ್ನು ತಿಳಿಸಿ, ನಮಸ್ಕರಿಸಿ, "ಏನು ಬರೆಯುತ್ತಿರುವೆ?" ಎಂದು ಕೇಳಿದ.

ದೇವದೂತನು ತಾನು ಗೆಬ್ರಿಯಲ್‌ನೆಂದೂ, ದೇವರ ಸ್ನೇಹಿತರ ಹೆಸರುಗಳನ್ನು ಪಟ್ಟಿ ಮಾಡುತ್ತಿರುವೆ ಎಂದೂ ತಿಳಿಸಿದ. ತನ್ನ ಹೆಸರೇನಾದರೂ ಅದರಲ್ಲಿದೆಯೆ ಎಂದು ಇಬ್ರಾಹಿಂ ವಿಚಾರಿಸಲು,"ನೀನು ದೇವರ ಸ್ನೇಹಿತ ಅಲ್ಲ, ಹೀಗಾಗಿ ನಾನು ನಿನ್ನ ಹೆಸರನ್ನು ಬರೆದಿಲ್ಲ" ಎಂದನು.

ದೇವರ ಸ್ನೇಹಿತರ ಸ್ನೇಹಿತರನ್ನು ಪಟ್ಟಿಮಾಡಿದ ಇನ್ನೊಂದು ಪುಸ್ತಕ ಏನಾದರೂ ಇದೆಯೇ ಎಂದು ಇಬ್ರಾಹಿಂ ಮತ್ತೆ ಕೇಳಿದನು. ಗೆಬ್ರಿಯಲನು ತಲೆ ಅಲ್ಲಾಡಿಸಿ,

ಬಹು ಹೊತ್ತು ಇಬ್ರಾಹಿಮನ ಮುಖವನ್ನೇ ನೋಡಿದನು.

ಅನಂತರ ಬಂಗಾರದ ಪುಸ್ತಕದ ಮೊದಲ ಪುಟವನ್ನು ತೆರೆದು ತೋರಿಸುತ್ತ ಹೇಳಿದನು: "ಇಬ್ರಾಹಿಂ, ನಿನ್ನ ಹೆಸರನ್ನು ನಾನಲ್ಲ, ದೇವರೇ ಬರೆದಿದ್ದಾನೆ ನೋಡು. ಮಾನವನ ಸ್ನೇಹಿತನೇ ದೇವನ ಸ್ನೇಹಿತ!"

ನಿಜಕ್ಕೂ ಅಲ್ಲಿ ಇಬ್ರಾಹಿಂ ಎಂಬ ಹೆಸರು ಬಂಗಾರದ ಅಕ್ಷರಗಳಲ್ಲಿ ಹೊಳೆಯುತ್ತ ಇತ್ತು!

❖ ❖ ❖

ಇಬ್ರಾಹಿಂ ಒಮ್ಮೆ ಮಾಲಿಯಾಗಿ ಕೆಲಸ ಮಾಡುತ್ತಿದ್ದ. ಕೆಲಸ ಕಷ್ಟ. ಆದರೂ ಪ್ರಕೃತಿಯ ನಡುವೆ ಇರಲು ಅವನಿಗೆ ಇಷ್ಟ. ಗಿಡಗಳ ಬೆಳವಣಿಗೆ ಸೃಷ್ಟಿಕರ್ತನ ನೆನಪು ತರುತ್ತಿತ್ತು.

ಒಂದು ದಿನ ಮಾಲಿಕ "ಈಗ ಯಾವ ಹಣ್ಣು ತುಂಬಾ ಬಿಟ್ಟಿದೆ? ಒಳ್ಳೆಯದನ್ನು ಆರಿಸಿ ತಾ" ಎಂದ. ಇಬ್ರಾಹಿಂ ಈಗ ದಾಳಿಂಬೆಯ ಕಾಲ ಎನ್ನುತ್ತ ಕೆಂಪಗೆ ಇದ್ದ ಕೆಲವನ್ನು ತಂದುಕೊಟ್ಟ.

ಮಾಲಿಕ ಮನೆಯಲ್ಲಿ ಅವನ್ನು ತಿಂದ. ತುಂಬಾ ಹುಳಿ. ಸಿಟ್ಟಿನಿಂದ ಬಂದು ಇಬ್ರಾಹಿಮನನ್ನು ಗದರಿಸಿದ. ಇಬ್ರಾಹಿಂ ಹೇಳಿದ: "ತೋರಿಕೆಗೆ ರುಚಿ ತಿಳಿಯುವುದಿಲ್ಲ. ನೋಡಲು ಎಷ್ಟು ಚೆನ್ನಾಗಿ ಇದ್ದುವು! ನಾನು ಗಿಡಗಳನ್ನು ಚೆನ್ನಾಗಿ ಬೆಳೆಸಿದ್ದೇನೆ. ಆದರೆ ಎಂದೂ ಹಣ್ಣಿನ ರುಚಿ ನೋಡಿಯೇ ಇಲ್ಲ."

ಮಾಲಿಕ ಇದನ್ನು ನಂಬದೆ, "ಸುಳ್ಳು ಹೇಳುತ್ತಿದ್ದೀಯಾ! ಇಷ್ಟು ಹಣ್ಣಿರುವಾಗ ತಿನ್ನದೇ ಇರುತ್ತೀಯಾ?" ಎಂದ. "ತೋಟವನ್ನು ನೋಡಿಕೊಂಡಿದ್ದಕ್ಕೆ ಸಂಬಳ ಸಿಕ್ಕುತ್ತದಲ್ಲಾ! ಹಣ್ಣೇಕೆ ತಿನ್ನಬೇಕು?" ಎಂದ ಇಬ್ರಾಹಿಮನ ಪ್ರಾಮಾಣಿಕತನಕ್ಕೆ ಮಾಲಿಕ ಬೆರಗಾದ. ಆದರೂ ಅವನ ಮೇಲೆ ಪತ್ತೇದಾರರನ್ನು ನಿಯಮಿಸಿದ. ಅವರು "ಇಬ್ರಾಹಿಮನು ನಿಜವಾಗಿಯೂ, ಕಷ್ಟಪಟ್ಟು ಕೆಲಸ ಮಾಡಿ, ವಿರಾಮದ ವೇಳೆ ಪ್ರಾರ್ಥನೆ ಮಾಡುತ್ತಾನೆ. ಅನೇಕರು ಅವನನ್ನು ಗುರುವೆಂದು ಭಾವಿಸಿ, ಉಪದೇಶ ಬೇಡಿ ಬರುವರು" ಎಂದು ತಿಳಿಸಿದರು. ಇವನೇ ಪ್ರಸಿದ್ಧ ಸಂತ ಇಬ್ರಾಹಿಮನೆಂದು ತಿಳಿದ ಮಾಲಿಕ ಅವನ ಬಳಿ ಬಂದು ಕ್ಷಮೆ ಕೇಳಿದ. ಆಗ ಇಬ್ರಾಹಿಂ "ನೀನು ನನಗೆ ಕೆಲಸ ನೀಡಿದ್ದಕ್ಕೆ ನಾನು ಕೃತಜ್ಞ. ಮಾಲಿಕ ನೌಕರನಿಗೆ ಏನನ್ನಾದರೂ ಹೇಳಬಹುದು" ಎಂದ. ಅನಂತರ ಮಾಲಿಕ ಎಲ್ಲರಿಗೂ ಸಂತನ ವಿಷಯ ಹೇಳಿದ. ಹೆಚ್ಚು ಜನ ಇಬ್ರಾಹಿಮನನ್ನು ನೋಡಲು ಬರತೊಡಗಿದರು. ಹೀಗಾಗಿ, ಆ ಕೆಲಸ ಬಿಟ್ಟು, ಕಾಡಿಗೆ ಹೊರಟುಬಿಟ್ಟ ಇಬ್ರಾಹಿಂ.

ಇಬ್ರಾಹಿಂ ತನ್ನ ಕೊನೆಯ ದಿನಗಳನ್ನು ಸಮಾಜದಿಂದ ದೂರವಿದ್ದು ಜನಸಂಪರ್ಕವೇ ಇಲ್ಲದೆ ಕಳೆದನು. ಅವನು ಎಲ್ಲಿ ದೇಹತ್ಯಾಗ ಮಾಡಿದ ಎಂಬುದು ತಿಳಿಯದು. ಕೆಲವರು ಹೇಳುತ್ತಾರೆ ಅವನ ದೇಹವನ್ನು ಶಾಮ್‌ನಲ್ಲಿ ಹೂಳಲಾಗಿದೆಯೆಂದು. ಇನ್ನೂ ಕೆಲವರು ಬಾಗ್ದಾದ್‌ನಲ್ಲಿ ಅವನ ಸಮಾಧಿ ಇದೆಯೆಂದು ಹೇಳುತ್ತಾರೆ. *(ಆಧಾರಿತ)*

## *ಅಹಂಗೆ ಶಿಕ್ಷೆ*

**ಇಬ್ರಾಹಿಂ ಮೆಕ್ಕಾದ ಕಡೆ ಹೋಗುತ್ತಿದ್ದನು. ಊರನ್ನು ಸಮೀಪಿಸುತ್ತಿದ್ದಂತೆಯೇ ಅವನನ್ನು ಸ್ವಾಗತಿಸಲು ಜನರು ಬಹುಸಂಖ್ಯೆಯಲ್ಲಿನೆರೆದರು. ಮೆಕ್ಕಾದ ಪಂಡಿತೋತ್ತಮರು ಊರಿನ ಮಹಾದ್ವಾರಗಳಲ್ಲಿ ಬಂದು ನಿಂತಿದ್ದರು—ಅವನನ್ನು ಸನ್ಮಾನಿಸಲು.**

**ಇಬ್ರಾಹಿಮನಿಗೆ ದೂರದಿಂದಲೇ ಇದರ ಸುಳಿವು ಸಿಕ್ಕಿತು. ಈ ಕೀರ್ತಿ ಸನ್ಮಾನ ಯಾವುದೂ ಅವನಿಗೆ ಬೇಕಿರಲಿಲ್ಲ. ಅವನು ತನ್ನ ಸಂಗಡಿಗರಿಂದ ತಪ್ಪಿಸಿಕೊಂಡು ಬೇರೆ ಕಡೆ ಹೊರಟುಹೋದ. ದಾರಿಯಲ್ಲಿ ಕೆಲವು ಸೇವಕರು ಅವನಿಗೆ ಸಿಕ್ಕಿದರು. ಅವರಿಗೆ ಇಬ್ರಾಹಿಮನ ಪರಿಚಯವಿರಲಿಲ್ಲ. ಅವರು ಅವನನ್ನು "ಇಬ್ರಾಹಿಂ ಆದಮನ ಬಗ್ಗೆ ನಿಮಗೆ ಗೊತ್ತೆ?" ಎಂದು ವಿಚಾರಿಸಿದರು.**

**"ಅವನೊಬ್ಬ ಪಾಷಂಡ. ಮೆಕ್ಕಾದ ಪಂಡಿತೋತ್ತಮರ ಮುಂದೆ ಅವನೆಲ್ಲಿ?" ಎಂದು ಇಬ್ರಾಹಿಮನು ಉತ್ತರಿಸಿದ. ಇದನ್ನು ಕೇಳಿ ಆ ಸೇವಕರು ರೇಗಿದರು. "ನಮ್ಮ ಇಬ್ರಾಹಿಮನನ್ನು, ಆ ಸಂತಶ್ರೇಷ್ಠನನ್ನು 'ಪಾಷಂಡ' ಎಂದು ಕರೆಯಲು ನಿನಗೆಷ್ಟು ಧಿಮಾಕು! ನೀನೇ ಪಾಷಂಡ," ಎಂದು ಅವನನ್ನು ಸರಿಯಾಗಿ ಥಳಿಸಿದರು. ಇಬ್ರಾಹಿಮನು ನಕ್ಕು, "ಅದನ್ನೇ ನಾನು ಹೇಳಿದುದು ಕೂಡ" ಎಂದನು.**

**ಆ ಸೇವಕರು ಅವನನ್ನು ಅಲ್ಲಿಯೇ ಬಿಟ್ಟು ಇಬ್ರಾಹಿಮನನ್ನು ಅರಸಿಕೊಂಡು ಬೇರೆಕಡೆ ಹೊರಟು ಹೋದರು. ಆಗ ಇಬ್ರಾಹಿಂ ತನ್ನ ಅಹಂ ಅನ್ನು ಉದ್ದೇಶಿಸಿ ಹೇಳುತ್ತಾನೆ: "ನೋಡಿದೆಯಾ, ನಿನಗೆ ಹೇಗೆ ಶಿಕ್ಷೆಯಾಯಿತು? ದೇವರಿಗೆ ಧನ್ಯವಾದಗಳು, ನಾನು ಸೋಲಲಿಲ್ಲ, ಸ್ವಾಗತದ ಹೆಮ್ಮೆ ಮತ್ತು ಸುಖವನ್ನು ನೀನು ಅನುಭವಿಸದಂತೆ ಮಾಡಿದೆ."**